# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 939 ಗ್ರಾಪಂಅ 2016(3)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:19.11.2016

## ಸುತ್ತೋಲೆ

ವಿಷಯ: ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕ್ಕೆ ತಿದ್ದುಪಡಿ ತಂದ ಪರಿಣಾಮವಾಗಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವ ವಿಷಯವಾಗಿ ಈ ಹಿಂದೆ ಹೊರಡಿಸಲಾದ ಸುತ್ತೋಲೆಗಳನ್ನು ಹಿಂಪಡೆದು, ಹೊಸ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

***

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕ್ಕೆ ತಿದ್ದುಪಡಿ ತಂದ ಪರಿಣಾಮವಾಗಿ, ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವ ವಿಷಯವಾಗಿ ಈ ಹಿಂದೆ ಹೊರಡಿಸಲಾದ ಸುತ್ತೋಲೆಗಳನ್ನು ಹಿಂಪಡೆದು, ತಿದ್ದುಪಡಿಯಾದ ಕಾಯ್ದೆಗೆ ಅನುಗುಣವಾಗಿ ಹೊಸದಾಗಿ ಸುತ್ತೋಲೆಗಳನ್ನು ಹೊರಡಿಸುವ ಅವಶ್ಯಕತೆಯಿರುತ್ತದೆ. ಆದುದರಿಂದ, ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವ ವಿಷಯವಾಗಿ ಈ ಹಿಂದೆ ಹೊರಡಿಸಲಾದ ಕೆಳಗೆ ನಮೂದಿಸಿದ ಸುತ್ತೋಲೆಗಳನ್ನು ಹಿಂಪಡೆಯಲಾಗಿದೆ.

| ಕ್ರ.ಸಂ. | ಹಿಂಪಡೆಯಲಾದ ಸುತ್ತೋಲೆ ಸಂಖ್ಯೆ | ವಿಷಯ |
|---|---|---|
| 1 | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 141 ಯೋಉಮಾ 2005, ದಿನಾಂಕ 18.08.2005 | ತಾಲ್ಲೂಕು ಮಟ್ಟದ ಜಾಗೃತಿ ಸಮಿತಿಯ ಬಗ್ಗೆ. |
| 2 | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 107 ಯೋಉಮಾ 2005, 25.06.2005 | ಜಿಲ್ಲಾ ಅಭಿವೃದ್ಧಿ ಯೋಜನೆ ತಯಾರಿಕೆ ಬಗ್ಗೆ. |
| 3 | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 21 ಗ್ರಾಪಸ 2013, ದಿನಾಂಕ 27.06.2013 | 13ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆಯ ಮಾರ್ಗಸೂಚಿಗಳು. |
| 4 | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 47 ತಾಪಸ 2013, ದಿನಾಂಕ 08.07.2013 | ಪಿ.ಇ.ಎ.ಐ.ಎಸ್. ಯೋಜನೆ ಅನುಷ್ಠಾನದ ಸಂಬಂಧ ವಿವಿಧ ಸಮಿತಿಗಳನ್ನು ರಚಿಸುವ ಬಗ್ಗೆ. |

ತಿದ್ದುಪಡಿಯಾದ ಕಾಯ್ದೆಗೆ ಅನುಗುಣವಾಗಿ ಹೊಸ ಮಾರ್ಗಸೂಚಿಗಳನ್ನು ಈ ಕೆಳಗಿನಂತೆ ಹೊರಡಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಕ್ಕೆ ಸಮಗ್ರ ತಿದ್ದುಪಡಿಯನ್ನು ತರಲಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಎಂದು ಪುನರ್ನಾಮಿಕರಿಸಲಾಗಿದೆ. ಅಧಿಕಾರ ವಿಕೇಂದ್ರೀಕರಣ ತತ್ವದ ಆಧಾರದ ಮೇಲೆ ಗ್ರಾಮದ ತಳಮಟ್ಟದಿಂದ ರಾಜ್ಯ ಮಟ್ಟದವರೆಗೂ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲು ಗ್ರಾಮೀಣ ಜನತೆಯ ಸಹಭಾಗಿತ್ವವನ್ನು ತಳಮಟ್ಟದ ಜನವಸತಿ ಸಭೆಯಿಂದ ಗ್ರಾಮ ಸಭೆಯವರೆಗೂ ಉತ್ತೇಜಿಸಲು ಹಲವಾರು ದಿಟ್ಟ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

ಪ್ರಕರಣ 309 ಕ್ಕೆ ವ್ಯಾಪಕ ತಿದ್ದುಪಡಿಯನ್ನು ತರಲಾಗಿದ್ದು, 309, 309–ಎ, 309–ಬಿ, 309–ಸಿ,309–ಡಿ, 309–ಇ, 309–ಎಫ್ 309–ಜಿ ಮತ್ತು 309–ಹೆಚ್ ಗಳನ್ನು ಅಳವಡಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಗ್ರಾಮ ಪಂಚಾಯತಿಗಳು ಸ್ವಯಂ ಆಡಳಿತ ಸಂಸ್ಥೆಗಳಾಗಿ ಸಾಮಾಜಿಕ ನ್ಯಾಯ ಸೇರಿದಂತೆ ಪಂಚಾಯತ್ ರಾಜ್

ಸಂಸ್ಥೆಗಳಿಗೆ ವಹಿಸಿರುವ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಬೇಕಾಗಿದೆ.

ಪ್ರತಿಯೊಂದು ಗ್ರಾಮ ಪಂಚಾಯತಿಯು ರಚನೆಯಾದ ದಿನಾಂಕದಿಂದ 3 ತಿಂಗಳೊಳಗೆ ಜನವಸತಿ ಸಭಾ, ವಾರ್ಡ್ ಸಭಾ ಮತ್ತು ಗ್ರಾಮ ಸಭೆಗಳನ್ನು ನಡೆಸಿ ಆ ಪ್ರದೇಶದ ಸಂಪನ್ಮೂಲಗಳನ್ನು, ಜನಸಂಖ್ಯೆ ಮತ್ತು ಅಗತ್ಯತೆಗಳ ಬಗ್ಗೆ ಪರಾಮರ್ಶೆ ನಡೆಸಬೇಕು. ಸಮಗ್ರ ಅಭಿವೃದ್ಧಿ ಆಧಾರದ ಮೇಲೆ ಗ್ರಾಮ ಪಂಚಾಯತಿಯ ಅಭಿವೃದ್ಧಿಗಾಗಿ ಮುಂದಿನ 5 ವರ್ಷಗಳಿಗೆ ಪ್ರತಿ ವರ್ಷಕ್ಕೆ ವಾರ್ಷಿಕ ಯೋಜನೆಯ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಬೇಕು. "ಆದ್ಯತೆ ರ್‍ಯಾಂಕಿಂಗ್" ಬಳಸಿಕೊಂಡು ಫಲಾನುಭವಿಗಳನ್ನು, ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಹಾಗೂ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಪ್ರದೇಶದ ಹಿಂದುಳಿದಿರುವಿಕೆ, ಅವಶ್ಯಕತೆ ಹಾಗೂ ಆದ್ಯತೆಗಳನ್ನು ಗಮನಿಸಿಕೊಳ್ಳುವುದು. ಆದ್ಯತೆ ವಿಷಯಗಳು ಜವಾಬ್ದಾರಿ ನಕ್ಷೆಯಲ್ಲಿ ಹೇಳಲಾದ ಆದ್ಯತೆಯ ಮೇಲಿರಬೇಕು. ಮುಂದಿನ ಹಣಕಾಸು ವರ್ಷದ ಅವಧಿಯಲ್ಲಿ ನಿಧಿಗಳ ಲಭ್ಯತೆಗೆ ಒಳಪಟ್ಟು ಪ್ರತಿಯೊಂದು ಗ್ರಾಮ ಪಂಚಾಯತಿಯು ಅದೇ ವರ್ಷದ ಅಕ್ಟೋಬರ್ ಒಳಗಾಗಿ ಕ್ರೋಢೀಕರಣ ಮತ್ತು ಸಂಯೋಜನೆಗಾಗಿ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ವಾರ್ಷಿಕ ಕರಡು ಯೋಜನೆಯನ್ನು ಸಲ್ಲಿಸತಕ್ಕದ್ದು.

ತಾಲ್ಲೂಕು ಹಂತದಲ್ಲಿ ತಾಲ್ಲೂಕಿನ ದೊಡ್ಡ ಭಾಗಗಳನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು ಅಧ್ಯಕ್ಷರಾಗಿರುವ ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿರುವ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಮುಂದೆ ತಾಲ್ಲೂಕಿನ ಗ್ರಾಮ ಪಂಚಾಯತಿಗಳು ಸಲ್ಲಿಸಿರುವ ಅಭಿವೃದ್ಧಿ ಯೋಜನೆಯ ಪ್ರತಿಗಳನ್ನು ಮಂಡಿಸಬೇಕು.

1. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಎಲ್ಲಾ ಪಂಚಾಯತಿಗಳ ಮತ್ತು ನಗರ ಸ್ಥಳೀಯ ಸ್ವಯಂ ಆಡಳಿತಗಳು ಸಲ್ಲಿಸಿದ ಕರಡು ವಾರ್ಷಿಕ ಯೋಜನೆಗಳನ್ನು ಸ್ವೀಕರಿಸತಕ್ಕದ್ದು ಮತ್ತು ತಾಲ್ಲೂಕು ಮಟ್ಟದಲ್ಲಿ ಪ್ರತಿಯೊಂದು ವಲಯದ ಆದ್ಯತೆಗಳನ್ನು ವಲಯವಾರು ಗುರುತಿಸಿ ಕ್ರೋಢೀಕರಿಸುವುದು.
2. ಆದ್ಯತೆ ನಕಾಶೆ ಮತ್ತು ಯೋಜನೆಗಳ ಕ್ರೋಢೀಕರಣ ವಿಧಾನವನ್ನು ಅನುಸರಿಸಿ ಆದ್ಯತೆಯ ವಿಷಯಗಳ ಮೂಲಕ ಮಧ್ಯಂತರ ಮಟ್ಟದಲ್ಲಿ ಸಂಯೋಜನೆ ಕಾರ್ಯವಿಧಾನವನ್ನು ಸಾಧಿಸುವುದು.
3. ಗ್ರಾಮ ಪಂಚಾಯತಿಗಳ ಯೋಜನೆಗಳಲ್ಲಿ ಶಿಫಾರಸ್ಸುಗಳು ಮತ್ತು ಆದ್ಯತೆ ಬದಲಾಯಿಸಲು, ಮಾರ್ಪಡಿಸಲು ಅಥವಾ ವ್ಯತ್ಯಾಸಗೊಳಿಸಲು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗೆ ಅಧಿಕಾರವಿಲ್ಲ.
4. ಸ್ಥಳೀಯ ಸ್ವಯಂ ಆಡಳಿತಗಳ ಪ್ರತಿಯೊಂದು ಪ್ರತ್ಯೇಕ ಘಟಕದ ಆದ್ಯತೆಗಳನ್ನು ಗುರುತಿಸುವ ಗುರಿಯೊಂದಿಗೆ ಕ್ರೋಢೀಕರಣದ ಪರಿಣಾಮವಾಗಿ ಮಧ್ಯಂತರ ಮಟ್ಟದಲ್ಲಿ ಸಿದ್ಧಪಡಿಸಲಾಗುವ ಯೋಜನೆಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.

    ಅ) ಒಂದು ಅಥವಾ ಹೆಚ್ಚಿನ ಸ್ಥಳೀಯ ಪ್ರಾಧಿಕಾರದ ಮೂಲಕ ನಡೆಯುವ ಯೋಜನೆಗಳ ಸ್ಥಳ ವಿಸ್ತಾರದ ಸಂಯೋಜನೆ ಮತ್ತು ಸಾಧನೆಗಳ ಸಂಯೋಜನೆ.

    ಆ) ಅಂತರ ವಲಯಕ್ಕೆ ಸಂಬಂಧಿಸಿದ ಹಲವಾರು ಯೋಜನೆಗಳ ಸಂಯೋಜನೆ (ವಲಯವಾರು ಸಂಯೋಜನೆ)

    ಇ) ಅಂತರ ವಲಯ ಯೋಜನೆ ಎಂದರೆ,- ವಿವಿಧ ಯೋಜನೆಗಳ ಸಂಪನ್ಮೂಲಗಳ ಮೂಲಕ ಅನುಷ್ಠಾನಗೊಳಿಸುವ ಯೋಜನೆ.

ಈ) ನೇರ ಸಂಯೋಜನೆ ಎಂದರೆ,- ಉನ್ನತ ಪಂಚಾಯತ್ ಮಟ್ಟಗಳಲ್ಲಿ ಮಾಡಬೇಕಾಗಿರುವ ಕಾರ್ಯಕ್ರಮಗಳು.

ಉ) ಸಂಪನ್ಮೂಲಗಳ ಸಂಯೋಜನೆ ಎಂದರೆ,- ಪಂಚಾಯತ್ ಬಳಸಬಹುದಾದ ಸ್ಥಳೀಯ ಯೋಜನೆಗಳೊಳಗೆ ಸಂಯೋಜಿಸಬಹುದಾದ ಮತ್ತು ಯಾವುದಕ್ಕೂ ಅವು ಹೆಚ್ಚುವರಿ ಸಂಪನ್ಮೂಲಗಳನ್ನು ಕೊಡುಗೆ ನೀಡಬಹುದೇ ಅಂತಹ ಕೇಂದ್ರ ಪ್ರಾಯೋಜಿತ ಮತ್ತು ರಾಜ್ಯ ಪ್ರಾಯೋಜಿತ ಎರಡೂ ವಿವಿಧ ಸ್ಕೀಮ್‌ಗಳ ವರ್ಗೀಕರಣವನ್ನು ಗುರುತಿಸುವುದು ಮತ್ತು ಯೋಜಿಸುವುದನ್ನು ಗಮನಿಸುವುದು.

**ಜಿಲ್ಲಾ ಪಂಚಾಯತ್ ಯೋಜನೆ:**

ಜಿಲ್ಲಾ ಪಂಚಾಯತಿಗಳು ಜಿಲ್ಲಾ ಪಂಚಾಯತಿಯ ಕರಡು ಯೋಜನೆಯನ್ನು ಸಿದ್ಧಪಡಿಸಬೇಕು ಮತ್ತು ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಪಂಚಾಯತಿಗಳ ಯೋಜನೆಗಳನ್ನು ಕ್ರೋಢೀಕರಿಸುವುದು ಮತ್ತು ಜಿಲ್ಲಾ ಯೋಜನಾ ಸಮಿತಿಯ ಮುಂದೆ ಮಂಡಿಸುವುದಕ್ಕೆ ಜವಾಬ್ದಾರಿಯುತವಾಗಿರುತ್ತದೆ.

**ಜಿಲ್ಲಾ ಯೋಜನಾ ಸಮಿತಿ:**

ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳು, ಪಟ್ಟಣ ಪಂಚಾಯತಿಗಳು ಜಿಲ್ಲೆಯಲ್ಲಿರುವ ಪುರಸಭಾ ಪರಿಷತ್ತುಗಳು ಮತ್ತು ನಗರ ಪೌರಸಭಾ ನಿಗಮಗಳ ಯೋಜನೆಗಳನ್ನು ಕ್ರೋಢೀಕರಿಸಲು ಮತ್ತು ಒಟ್ಟಾರೆ ಜಿಲ್ಲೆಗಾಗಿ ಒಂದು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಲು ಪ್ರತಿಯೊಂದು ಜಿಲ್ಲೆಗೂ ಕೆಳಕಂಡ ಸದಸ್ಯರನ್ನೊಳಗೊಂಡ ಒಂದೊಂದು ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಬೇಕು.

| | |
|---|---|
| (ಅ) ಸಂಬಂಧಪಟ್ಟ ಜಿಲ್ಲೆಯ ಉಸ್ತುವಾರಿ ಸಚಿವರು | ಸದಸ್ಯರು |
| (ಆ) ಜಿಲ್ಲಾ ಪಂಚಾಯತ್ ಅಧ್ಯಕ್ಷರು | ಸದಸ್ಯರು |
| (ಇ) ತಾಲ್ಲೂಕು ಯೋಜನಾ ಮತ್ತು ಅಭಿವೃದ್ಧಿ ಸಮಿತಿಯ ಪದನಿಮಿತ್ತ ಉಪಾಧ್ಯಕ್ಷರು ಆಗಿರುವ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರು. | ಸದಸ್ಯರು |
| (ಈ) ಜಿಲ್ಲೆಯಲ್ಲಿನ ಪ್ರತಿಯೊಂದು ತಾಲ್ಲೂಕಿನಿಂದ ತಾಲ್ಲೂಕು ಯೋಜನಾ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರು (ತಾಲ್ಲೂಕು ಗ್ರಾಮ ಪಂಚಾಯತ್ ಮೂಲಕ ಚುನಾಯಿತರಾದವರು) | ಸದಸ್ಯರು |
| (ಉ) ಜಿಲ್ಲಾ ಪಂಚಾಯತ್‌ಗಳು, ತಾಲ್ಲೂಕು ಪಂಚಾಯತ್, ಪಟ್ಟಣ ಪಂಚಾಯತಿಗಳ ಮತ್ತು ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳ ಮತ್ತು ನಗರ ಪ್ರದೇಶಗಳ ಜನಸಂಖ್ಯೆಯ ನಡುವಿನ ಅನುಪಾತಕ್ಕೆ ಅನುಗುಣವಾಗಿ ಜಿಲ್ಲೆಯಲ್ಲಿ ನಗರ ಪಾಲಿಕೆ ಮತ್ತು ಪೌರಸಭಾಗಳ ಸದಸ್ಯರುಗಳ ಪೈಕಿಯಿಂದ ನೇಮಿಸಲಾದ ವಿಧಾನದಲ್ಲಿ ಚುನಾಯಿತರಾದ ಸದಸ್ಯರ ಒಟ್ಟು ಸಂಖ್ಯೆಯ ಐದನೆಯ ನಾಲ್ಕಕ್ಕಿಂತ ಕಡಿಮೆ ಇರದ ಅಂತಹ ಸಂಖ್ಯೆಯ ವ್ಯಕ್ತಿಗಳು. | ಸದಸ್ಯರು |

ಪೂರ್ತಿ ಜಿಲ್ಲೆ ಅಥವಾ ಜಿಲ್ಲೆಯ ಭಾಗವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರು, ಜಿಲ್ಲೆಯಲ್ಲಿ ಮತದಾರರೆಂದು ನೋಂದಣಿಯಾಗಿರುವ ರಾಜ್ಯಸಭಾ ಸದಸ್ಯರು, ಜಿಲ್ಲೆಯೊಳಗೆ ಇರುವ ಮತಕ್ಷೇತ್ರಗಳಲ್ಲಿನ ರಾಜ್ಯ ವಿಧಾನಸಭೆಯ ಎಲ್ಲಾ ಸದಸ್ಯರು ಜಿಲ್ಲೆಯಲ್ಲಿ ಮತದಾರರೆಂದು ನೋಂದಣಿಯಾಗಿರುವ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು, ಜಿಲ್ಲೆಯ ಜಿಲ್ಲಾಧಿಕಾರಿಗಳು ಜಿಲ್ಲಾ ಯೋಜನಾ ಸಮಿತಿಯ ಶಾಶ್ವತ ಆಹ್ವಾನಿತರಾಗಿರತಕ್ಕದ್ದು.

ಜಿಲ್ಲಾ ಯೋಜನಾ ಸಮಿತಿಯ ಚೇರ್ಮನ್‌ರನ್ನು ನಿಯಮಿಸಬಹುದಾದಂತ ವಿಧಾನದಲ್ಲಿ ಅವರುಗಳ ಪೈಕಿ ಆಯ್ಕೆ ಮಾಡತಕ್ಕದ್ದು.

**ಜಿಲ್ಲಾ ಅಭಿವೃದ್ಧಿ ಯೋಜನೆ:**

ಜಿಲ್ಲಾ ಯೋಜನಾ ಸಮಿತಿಯು ಅನುದಾನದ ಲಭ್ಯತೆಗೆ ಒಳಪಟ್ಟು, ಈ ಕೆಳಗಿನವುಗಳ ಕುರಿತಂತೆ ಕರಡು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಬೇಕು.

(1) ಸ್ಥಳ ವಿಸ್ತಾರ ಯೋಜನೆ, ನೀರಿನ ಹಂಚಿಕೆ ಇತರೆ ಭೌತಿಕ ಮತ್ತು ನೈಸರ್ಗಿಕ ಸಂಪನ್ಮೂಲ ಮೂಲ ಸೌಕರ್ಯಗಳ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಒಳಗೊಂಡಂತೆ ಜಿಲ್ಲೆಯಲ್ಲಿ ಪಂಚಾಯತಿಗಳು ಮತ್ತು ನಗರ ಸ್ಥಳೀಯ ಪ್ರಾಧಿಕಾರದ ನಡುವೆ ಸಮಾನ ಆಸಕ್ತಿಯ ವಿಷಯಗಳು.

(2) ಹಣಕಾಸು ಮತ್ತು ಲಭ್ಯವಿರುವ ಸಂಪನ್ಮೂಲಗಳ ವ್ಯಾಪ್ತಿ ಮತ್ತು ವಿಧಾನವನ್ನು ಗುರುತಿಸಬೇಕು.

(3) ಜಿಲ್ಲಾ ಯೋಜನಾ ಸಮಿತಿಯು ಪಂಚಾಯತಿಗಳ ಮತ್ತು ನಗರ ಸ್ಥಳೀಯ ಮತ್ತು ಇತರ ಯೋಜನಾ ಘಟಕಗಳ ಯೋಜನೆಗಳನ್ನು, ಅವುಗಳ ನಡುವೆ ಪರಸ್ಪರ ಸಮಾಲೋಚನೆ ಮತ್ತು ವ್ಯವಹರಿಸುವುದಕ್ಕೆ ಅವಕಾಶ ಕಲ್ಪಿಸುವುದು ಮತ್ತು ಗ್ರಾಮೀಣ ಯೋಜನೆಗಳ ವಲಯ ಮತ್ತು ಸ್ಥಳ ವಿಸ್ತಾರಗಳನ್ನು ಸಂಯೋಜಿಸುವುದಕ್ಕೆ ಚೌಕಟ್ಟನ್ನು ಕಲ್ಪಿಸಬೇಕು.

(4) ಜಿಲ್ಲಾ ಯೋಜನಾ ಸಮಿತಿಯ ಕ್ರೋಢೀಕರಣ ಮತ್ತು ಸಂಯೋಜನ ಕಾರ್ಯ ವಿಧಾನವು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಸಿದ್ಧಪಡಿಸಿದ ಯೋಜನೆಗಳನ್ನು ವ್ಯತ್ಯಾಸಗೊಳಿಸಬಾರದು. ಈಗಾಗಲೇ ಮೊದಲು ಸೇರಿರುವ ಅಥವಾ ಯೋಜನೆಗಳಲ್ಲಿ ಒಳಗೊಂಡಿರಬಹುದಾದ ಯೋಜನೆಗಳನ್ನು ಸೇರಿಸಬಾರದು.

(5) ಜಿಲ್ಲಾ ಯೋಜನಾ ಸಮಿತಿಯು ಕ್ರೋಢೀಕೃತ ಯೋಜನೆಯನ್ನು ಸಿದ್ಧಪಡಿಸುವಾಗ, ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಿರುವ ಸಂಘ ಸಂಸ್ಥೆಗಳೊಂದಿಗೆ ಸಮಾಲೋಚಿಸಬಹುದು. ಕ್ರೋಢೀಕರಣ ಮತ್ತು ಸಂಯೋಜನಾ ಕಾರ್ಯವಿಧಾನವು ಪೂರ್ಣವಾದ ನಂತರ ಜಿಲ್ಲಾ ಯೋಜನಾ ಸಮಿತಿಯ ರಾಜ್ಯ ಯೋಜನೆಗಳ ಸಂಯೋಜನೆಗೊಳ್ಳುವುದಕ್ಕಾಗಿ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಮೂಲಕ ಸರ್ಕಾರಕ್ಕೆ ಜಿಲ್ಲಾ ಯೋಜನೆಗಳನ್ನು ಕಳುಹಿಸಬೇಕು.

**ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ:**

ರಾಜ್ಯದ ಅಭಿವೃದ್ಧಿ ಯೋಜನೆಗಳನ್ನು ಮತ್ತು ಆಯವ್ಯಯ ದಸ್ತಾವೇಜಿನೊಂದಿಗೆ ಹಾಜರಿಪಡಿಸಬೇಕಾದ ವಾರ್ಷಿಕ ಹಣಕಾಸು ಪುನರಾವಲೋಕನೆಯನ್ನು ರೂಪಿಸುವುದಕ್ಕಾಗಿ ಸರ್ಕಾರವನ್ನು ಸಮರ್ಥಗೊಳಿಸಲು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1 | ಚೇರ್‌ಪರ್ಸನ್ | ಮುಖ್ಯಮಂತ್ರಿಗಳು |
| 2 | ವೈಸ್‌ಚೇರ್ಮನ್ | 1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು<br>2) ಹಣಕಾಸು ಸಚಿವರು<br>3) ಯೋಜನಾ ಸಚಿವರು<br>4) ನಗರಾಭಿವೃದ್ಧಿ ಸಚಿವರು<br>ಸರ್ಕಾರವು ನಾಮನಿರ್ದೇಶಿಸಿದ ಸಮಾಜದ ಆರ್ಥಿಕ ಅಭಿವೃದ್ಧಿಯ ಕ್ಷೇತ್ರದಲ್ಲಿ ತಜ್ಞರಾದ ಒಬ್ಬರು ಸರ್ಕಾರೇತರ ಸದಸ್ಯರು |
| 3 | ಸದಸ್ಯರು | 1. ರಾಜ್ಯದ ಅಭಿವೃದ್ಧಿ ಆಯುಕ್ತರು<br>2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ<br>3. ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ<br>4. ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ<br>5. ಸರ್ಕಾರವು ನಾಮನಿರ್ದೇಶನ ಮಾಡಿದ ಸ್ಥಳೀಯ ನಿಕಾಯಗಳನ್ನು ಪ್ರತಿನಿಧಿಸುವ ಇಬ್ಬರು ವಿಧಾನಪರಿಷತ್ ಸದಸ್ಯರು.<br>6. ಸರ್ಕಾರವು ನಾಮ ನಿರ್ದೇಶನ ಮಾಡಿದ ಎಂಟು ಸದಸ್ಯರು, ಅವರಲ್ಲಿ<br>(ಎ) ಜಿಲ್ಲಾ ಯೋಜನಾ ಸಮಿತಿಗಳ ಇಬ್ಬರು ಚೇರ್‌ಪರ್ಸನ್ಸ್. ಅವರಲ್ಲಿ ಕಂದಾಯ ಪ್ರಾದೇಶಿಕ ವಿಭಾಗದಿಂದ ಒಬ್ಬರು ಇರತಕ್ಕದ್ದು.<br>(ಬಿ) ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳ ಇಬ್ಬರು ಚೇರ್‌ಪರ್ಸನ್ಸ್. ಅವರಲ್ಲಿ ಕಂದಾಯ ಪ್ರಾದೇಶಿಕ ವಿಭಾಗದಿಂದ ಒಬ್ಬರು ಇರತಕ್ಕದ್ದು.<br>(ಸಿ) ಗ್ರಾಮ ಪಂಚಾಯತಿಗಳ ಇಬ್ಬರು ಚೇರ್‌ಪರ್ಸನ್ಸ್ – ಅವರಲ್ಲಿ ಕಂದಾಯ ಪ್ರಾದೇಶಿಕ ವಿಭಾಗದಿಂದ ಒಬ್ಬರು ಇರತಕ್ಕದ್ದು.<br>(ಡಿ) ನಗರ ಸ್ಥಳೀಯ ನಿಕಾಯಗಳ ಇಬ್ಬರು ಚೇರ್‌ಪರ್ಸನ್ಸ್: ನಗರ ಪಾಲಿಕೆಗಳನ್ನು ಪ್ರತಿನಿಧಿಸುವ ಒಬ್ಬರು, ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳನ್ನು ಪ್ರತಿನಿಧಿಸುವ ಒಬ್ಬರು ಅಥವಾ ಪಟ್ಟಣ ಪಂಚಾಯತ್‌ಗಳನ್ನು ಪ್ರತಿನಿಧಿಸುವ ಒಬ್ಬರು ಮತ್ತು ಪಟ್ಟಣ ಮುನ್ಸಿಪಾಲಿಟಿಗಳನ್ನು ಪ್ರತಿನಿಧಿಸುವ ಒಬ್ಬರು. ಪರಂತು ಎಂಟರಲ್ಲಿ ಕನಿಷ್ಠ ಒಬ್ಬರು ಮಹಿಳೆಯಾಗಿರತಕ್ಕದ್ದು. ಅನುಸೂಚಿತ ಜಾತಿಗಳಿಂದ ಒಬ್ಬರು ಪ್ರತಿನಿಧಿ. ಅನುಸೂಚಿತ ಪಂಗಡಗಳಿಂದ ಒಬ್ಬರು ಪ್ರತಿನಿಧಿ, ಅಲ್ಪಸಂಖ್ಯಾತರ ಸಮುದಾಯವು ಒಳಗೊಂಡಂತೆ ಇತರೆ ಹಿಂದುಳಿದ ವರ್ಗಗಳ ಒಬ್ಬರು ಪ್ರತಿನಿಧಿ.<br>(ಇ) ತಜ್ಞರಾಗಿರುವ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ, ಕೈಗಾರಿಕೆ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ಲಿಂಗ ಸಂಬಂಧಿ ವಿಷಯಗಳು (ಮಹಿಳೆಯಾಗಿರತಕ್ಕದ್ದು) ಮಕ್ಕಳ ಹಕ್ಕುಗಳು – ಮಕ್ಕಳ ಹಕ್ಕುಗಳ ಕಾರ್ಯಕರ್ತರು, ಆರ್ಥಿಕ, ಪಟ್ಟಣ ಮತ್ತು ಗ್ರಾಮ ಯೋಜನೆ ಮತ್ತು ಪರಿಸರ ಮತ್ತು ಜಲ ಸಂರಕ್ಷಣೆ ಈ ಕ್ಷೇತ್ರಗಳಿಂದ ಸರ್ಕಾರವು ನಾಮ ನಿರ್ದೇಶನ ಮಾಡಿದ ಐವರು ವ್ಯಕ್ತಿಗಳು. |
| 4 | ಸದಸ್ಯ ಕಾರ್ಯದರ್ಶಿ | ಯೋಜನಾ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿ. |

ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಸರ್ಕಾರೇತರ ಸದಸ್ಯರ ಪದಾವಧಿಯು ಐದು ವರ್ಷಗಳಿಗೆ ಅಥವಾ ಅವರ ಪದಾವಧಿ ಮುಕ್ತಾಯದವರೆಗೆ, ಅವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಗಿರತಕ್ಕದ್ದು.

(ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 195 ಜಿಪಸ 2016, ದಿನಾಂಕ:20.09.2016 ರಲ್ಲಿ ಮೇಲ್ಕಂಡ ಸಮಿತಿಯನ್ನು ರಚಿಸಲಾಗಿರುತ್ತದೆ.)

**ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಪ್ರಕಾರ್ಯಗಳು:**

(1) ಜಿಲ್ಲೆಯ ಯೋಜನೆಗಳು ಮತ್ತು ಇತರೆ ಯೋಜನಾ ಘಟಕಗಳ ನಡುವೆ ಪರಸ್ಪರ ಸಮಾಲೋಚನೆ ಮತ್ತು ವ್ಯವಹಾರಗಳನ್ನು ಕಲ್ಪಿಸುವುದಕ್ಕೆ ಅವುಗಳನ್ನು ಸಂಯೋಜಿಸತಕ್ಕದ್ದು ಮತ್ತು ನಗರ ಮತ್ತು ಗ್ರಾಮೀಣ ಯೋಜನೆಗಳ ವಲಯ ಮತ್ತು ಸ್ಥಳ ವಿಸ್ತರಣ ವಿಷಯಗಳನ್ನು ಸಂಯೋಜಿಸಿರುವುದಕ್ಕೆ ಚೌಕಟ್ಟನ್ನು ಕಲ್ಪಿಸುವುದು.

(2) ಈ ಸಮಿತಿಯ ಕ್ರೋಢೀಕರಣ ಮತ್ತು ಸಂಯೋಜನೆಯ ಪ್ರಕ್ರಿಯೆಯು ಜಿಲ್ಲೆಗಳು ಸಿದ್ಧಪಡಿಸಿರುವ ಯೋಜನೆಯನ್ನು ವ್ಯತ್ಯಾಸಗೊಳಿಸಬಾರದು.

(3) ಈ ಸಮಿತಿಯು ಕ್ರೋಢೀಕರಣ ಯೋಜನೆಯನ್ನು ಸಿದ್ಧಪಡಿಸುವಾಗ ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂತಹ ಸಂಸ್ಥೆಗಳು ಮತ್ತು ಸಂಘಗಳೊಂದಿಗೆ ಸಮಾಲೋಚನೆ ಮಾಡತಕ್ಕದ್ದು.

(4) ಕೇಂದ್ರೀಕರಣ ಮತ್ತು ಸಮಾಲೋಚನೆ ಪ್ರಕ್ರಿಯೆಯು ಪೂರ್ಣವಾದ ತರುವಾಯ ಸಮಿತಿಯು ಕೂಡಲೇ ಸರ್ಕಾರಕ್ಕೆ ಕ್ರೋಢೀಕರಣ ಯೋಜನೆಯನ್ನು ಕಳುಹಿಸಬೇಕು.

(5) ಸಮಿತಿಯು ಸ್ಥಳೀಯ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯ ಸೂತ್ರವನ್ನು ಸಹ ನೋಡಿಕೊಳ್ಳತಕ್ಕದ್ದು, ಜಿಲ್ಲೆಗಳ ಮತ್ತು ರಾಜ್ಯ ಯೋಜನೆಗಳ ಸಮನ್ವಯ ಮತ್ತು ಸ್ಥಳೀಯ ಸಂಸ್ಥೆಗಳನ್ನು ಬಲಗೊಳಿಸಲು ಕಾರ್ಯನೀತಿಗಳನ್ನು ರೂಪಿಸಬೇಕು.

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

ಗೆ,

1) ಮುಖ್ಯಮಂತ್ರಿಯವರ ಕಾರ್ಯಾಲಯದ ಪ್ರಧಾನ ಕಾರ್ಯದರ್ಶಿ,
2) ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ಬೆಂಗಳೂರು.
3) ಅಪರ ಮುಖ್ಯಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
4) ರಾಜ್ಯ ಎಲ್ಲಾ ಇಲಾಖಾ ಸಚಿವಾಲಯದ ಪ್ರಧಾನ ಕಾರ್ಯದರ್ಶಿಗಳು.
5) ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು.
6) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
7) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
8) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಯ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು.
9) ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.
10) ಸಂಪಾದಕರು, ಕರ್ನಾಟಕ ವಿಕಾಸ ಮಾಸಪತ್ರಿಕೆ – ಪ್ರಕಟಣೆಗಾಗಿ.
11) ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
12) ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರ ಆಪ್ತ ಕಾರ್ಯದರ್ಶಿಗಳು.
3) ನಿರ್ದೇಶಕರುಗಳು, ಪಂ.ರಾಜ್-1 ಮತ್ತು ಪಂ.ರಾಜ್-2,
4) ನಿರ್ದೇಶಕರು, ಮೂಲಭೂತ ಸೌಲಭ್ಯ ಮತ್ತು ಸುವರ್ಣ ಗ್ರಾಮೋದಯ,
5) ನಿರ್ದೇಶಕರು, ಯೋಜನೆ, ಉಸ್ತುವಾರಿ ಮತ್ತು ಮಾಹಿತಿ ವಿಭಾಗ,
6) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ,
7) ಇಲಾಖೆಯ ಎಲ್ಲಾ ಶಾಖೆಗಳು.